**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 336/2024
ಪಿಡಬ್ಲು :3 ಸಿಡಬ್ಲು :3

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಗದಿಗೆಪ್ಪ ಉಗರಗೋಳ |
| ತಂದೆಯ ಹೆಸರು | : | ಶ್ರೀ.ಕರೆಪ್ಪ ಉಗರಗೋಳ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಗೌಂಡಿ ಕೆಲಸ |
| ವಾಸ್ತವ್ಯ | : | ಹೂಲಿ |
| ದಿನಾಂಕ | : | 06-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 2 ಫ್ರಾಸಾಃ 2 ಜಯದೇವ ನನಗೆ ಗೊತ್ತಿರುವುದಿಲ್ಲ. ಚಾಸಾಃ4 ನನಗೆ ಗೊತ್ತಿರುತ್ತಾರೆ. ಚಾಸಾಃ 1 ಕಾವೇರಿಯವರ ಪರಿಚಯ ಇರುವುದಿಲ್ಲ. ಚಾಸಾಃ 13 ಚಾಸಾಃ 1 ರವರ ಗಂಡ ಯಲ್ಲಪ್ಪ ಇವರ ಪರಿಚಯ ಇರುತ್ತದೆ.

2. ಈಗ ಎರಡು ವರ್ಷಗಳ ಹಿಂದೆ ರಾಮದುರ್ಗ ಬಸ್ ಸ್ಟ್ಯಾಂಡನ ಹಿಂಭಾಗದಲ್ಲಿ ನಾನು ಕೆಲಸಕ್ಕೆ ಹೋಗಿದ್ದೇನು. ನಾನು ಮತ್ತು ಚಾಸಾಃ 2 ಜಯದೇವ ದ್ಯಾವಕ್ಕನವರು ಕೆಲಸಕ್ಕೆ ಹೋಗಿದ್ದೇವು. ಚಾಸಾಃ 13 ಯಲ್ಲಪ್ಪ ಅವರು ಅಲ್ಲಿಗೆ ಬಂದು ನಮ್ಮಿಬ್ಬರನ್ನು ರಾಮದುರ್ಗ ಪೋಲಿಸ ಠಾಣೆಗೆ ಕರೆದುಕೊಂಡು ಹೋದರು. ಪೋಲಿಸರು ನಮ್ಮ ಸಹಿ ಮಾಡಿಸಿಕೊಂಡರು ಮತ್ತು ಪೋಟೋ ತೆಗೆದರು. ಪೋಲಿಸರು ಯಾವ ಕಾರಣಕ್ಕೆ ಸಹಿ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ನನಗೆ ಹೇಳಿರುವುದಿಲ್ಲ, ನಾನೂ ಸಹ ಪೋಲಿಸರನ್ನು ಕೇಳಿರುವುದಿಲ್ಲ. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಒಂದು ದಾಖಲೆಯ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಆ ದಾಖಲೆಯು ವಸ್ತು ಜಪ್ತು

ಪಂಚನಾಮೆ ಆಗಿರುತ್ತದೆ. ಅದನ್ನು ಈಗಾಗಲೇ ನಿಪಿ–12 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–12 [ಬಿ] ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ–13 ಫೋಟೋವನ್ನು ನೋಡಿ ಅದರಲ್ಲಿ ತಮ್ಮ ಇರುವಿಕೆಯನ್ನು ಮತ್ತು ಚಾಸಾಃ 2 ಜಯದೇವ ಅವರ ಇರುವಿಕೆಯನ್ನು ಗುರುತಿಸಿದ್ದಾರೆ.

3. ಪೋಲಿಸ ಠಾಣೆಯಲ್ಲಿ ಪೋಲಿಸರು ನನಗೆ ಯಾವುದೇ ವಸ್ತುಗಳನ್ನು ತೋರಿಸಿರುವುದಿಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನಾನು ಪೋಲಿಸರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ಪೋಲಿಸರು ಬೇರೆ ಯಾವುದೇ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ, ನನ್ನ ಸಹಿ ಮಾಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 19–04–2024 ರಂದು ಪೋಲಿಸ ನೋಟಿಸಿನ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪೋಲಿಸ ನೋಟಿಸನ್ನು ನಿಪಿ–15 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–15 [ಎ] ಎಂದು ಗುರುತಿಸಲಾಯಿತು. ಪೋಲಿಸರು ನನಗೆ ನಿಪಿ–15 ರಂತೆ ನೋಟಿಸ ಕೊಟ್ಟು ಡಿ.ವೈ.ಎಸ್.ಪಿ ಕಚೇರಿಗೆ ಕರೆಸಿದ್ದರು ಎನ್ನುವುದು ಸರಿಯಲ್ಲ.

2. ಮಹಿಳಾ ಪೇದೆಯವರು ಆಸ್ಪತ್ರೆಯಿಂದ ತಂದಿದ್ದ, ಪ್ಯಾಕ್ ಮಾಡಲಾಗಿದ್ದ 8 ವಸ್ತುಗಳನ್ನು ನನ್ನ ಮುಂದೆ ಹಾಜರು ಮಾಡಿದ್ದು, ಡಿ.ವೈ.ಎಸ್.ಪಿ ರವರು ಆ ವಸ್ತುಗಳ

ಮೇಲೆ ನನ್ನ ಸಹಿ ಇರುವ ಚೀಟಿಗಳನ್ನು ಅಂಟಿಸಿ, ನಿಪಿ–12 ರಂತೆ ಪಂಚನಾಮೆಯನ್ನು ಮಾಡಿ, ವಸ್ತುಗಳನ್ನು ಜಪ್ತು ಮಾಡಿಕೊಂಡರು ಎನ್ನುವುದು ಸರಿ.

3. ನಿಪಿ–13 ಫೋಟೋದಲ್ಲಿ ಕಾಣುವ ವಸ್ತುಗಳ ಬಗ್ಗೆ ಪೋಲಿಸರು ಪಂಚನಾಮೆ ಮಾಡಿ ನನ್ನ ಸಹಿ ಮಾಡಿಸಿಕೊಂಡರು ಎನ್ನುವುದು ಸರಿ. ಸವದತ್ತಿ ಪೋಲಿಸ ಠಾಣೆಗೆ ಪೋಲಿಸರು ನನ್ನನ್ನು ಮತ್ತು ಚಾಸಾಃ 4 ಉಮೇಶ ಗೌಡಪ್ಪ ಅವರನ್ನು ಕರೆಸಿದ್ದರು ಎನ್ನುವುದು ಸರಿ. ಚಾಸಾಃ 13 ಯಲ್ಲಪ್ಪ ಅವರ ಹೆಂಡತಿ ಚಾಸಾಃ 1 ಕಾವೇರಿ ರವರು ಒಂದು ಮೊಬೈಲ ಪೋನ, ಒಂದು ಕರೆಂಟ್ ಬಿಲ್ ಮತ್ತು 7 ಪೋಟೋಗಳನ್ನು ಹಾಜರುಮಾಡಿದರು ಎನ್ನುವುದು ಸರಿ. ಅಲ್ಲಿ ಪೋಲಿಸರು ಪಂಚನಾಮೆ ಮಾಡಿ ಆ ವಸ್ತುಗಳನ್ನು ಜಪ್ತು ಮಾಡಿದರು ಎನ್ನುವುದು ಸರಿ. ಆ ಸಮಯದಲ್ಲಿ ಪೋಲಿಸರು ಪೋಟೋವನ್ನು ತೆಗೆದರು ಎನ್ನುವುದು ಸರಿ. ಆ ಸಮಯದಲ್ಲಿ ನಿಪಿ–3 ರ ಪೋಟೋವನ್ನು ತೆಗೆಯಲಾಯಿತು ಎನ್ನುವುದು ಸರಿ. ಸದರಿ ಪೋಟೋವನ್ನು ಸಾಕ್ಷಿ ಗುರುತಿಸಿದ್ದಾರೆ.

4. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಮು.ಮಾ.1 ಮೊಬೈಲನ್ನು ಚಾಸಾಃ 1 ಕಾವೇರಿಯವರು ಪೋಲಿಸರಿಗೆ ನೀಡಿದರು ಎಂದು ಸೂಚಿಸುವುದು ಸರಿ. ಪೋಲಿಸರು ಅದನ್ನು ಜಪ್ತು ಮಾಡಿದರು ಎನ್ನುವುದು ಸರಿ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಮು.ಮಾ.6 ಕರೆಂಟ್ ಬಿಲ್ ನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ಚಾಸಾಃ 1 ರವರು ಪೋಲಿಸರಿಗೆ ನೀಡಿದರು ಎಂದು ಸೂಚಿಸುವುದು ಸರಿ.

5. ಚಾಸಾಃ1 ಕಾವೇರಿಯವರು ನಮ್ಮನ್ನು ಮತ್ತು ಪೋಲಿಸರನ್ನು 1ನೇ ಆರೋಪಿಯನ್ನು ಆಕೆಯನ್ನು ಬಾಡಿಗೆ ಮನೆ ಮಾಡಿ ಇರಿಸಿದ ಮನೆಯನ್ನು

ತೋರಿಸುತ್ತೇನೆ ಎಂದು ಹೇಳಿ ಬೆಳಗಾವಿಯ ವೈಭವ ನಗರದಲ್ಲಿರುವ ಮನೆಗೆ ಕರೆದುಕೊಂಡು ಹೋಗಿ ಮೊದಲ ಅಂತಸ್ತಿನ ಮನೆ ತೋರಿಸಿದರು ಎಂದು ಸೂಚಿಸುವುದು ಸರಿ. ಆ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿದರು ಎನ್ನುವುದು ಸರಿ. ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ–4 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–4 [ಬಿ] ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಯಲಾದ ಪೋಟೋಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಪೋಟೋಗಳಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ–16 ಮತ್ತು ನಿಪಿ–17 ಎಂದು ಗುರುತಿಸಲಾಯಿತು.

6. ನಿಪಿ–4 ಪಂಚನಾಮೆ ಸಮಯದಲ್ಲಿ ಚಾಸಾಃ 1 ರವರು 1ನೇ ಆರೋಪಿ ಆಕೆಗೆ ನೀಡಿದ ಬುರ್ಖಾವನ್ನು ಹಾಜರುಮಾಡಿದ್ದು ಪೋಲಿಸರು ಅದನ್ನು ಜಪ್ತು ಮಾಡಿದರು ಎನ್ನುವುದು ಸರಿ. ನ್ಯಾಯಾಲಯದಲ್ಲಿ ಹಾಜರುಮಾಡಿದ್ದ ಬುರ್ಖಾವನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ಮು.ಮಾ.7 ಎಂದು ಗುರುತಿಸಲಾಗಿದೆ.

7. ಚಾಸಾಃ 1 ರವರು ಆರೋಪಿತರು ಅವರಿಗೆ ಅಡ್ಡಗಟ್ಟಿದ ಜಾಗ ಎಂದು ಹೇಳಿ ಬೈಲಹೊಂಗಲಿನ ಕಾಲೇಜಿನ ಹತ್ತಿರ ಹೋಗಿ ಜಾಗ ತೋರಿಸಿದ್ದು, ಪೋಲಿಸರು ಅಲ್ಲಿ ನಿಪಿ–7 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಮಾಡಿಸಿಕೊಂಡರು ಎನ್ನುವುದು ಸರಿ. ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ–7 [ಬಿ] ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ–8 ರಂತೆ ಪೋಟೋ ತೆಗೆಯಲಾಗಿದೆ ಎಂದು ಸೂಚಿಸುವುದು ಸರಿ.

8. ಚಾಸಾಃ 1 ರವರು ಪೋಲಿಸರನ್ನು ಮತ್ತು ನಮ್ಮನ್ನು ಕರೆದುಕೊಂಡು ಮಬನೂರು ಗ್ರಾಮಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸ್ಥಳ ತೋರಿಸಿ ಆರೋಪಿತರು ಅವರನ್ನು ಅಡ್ಡಗಟ್ಟಿ ಬೆದರಿಕೆ ಹಾಕಿದ ಸ್ಥಳ ಎಂದು ತೋರಿಸಿದ್ದು, ಅಲ್ಲಿ ಪೋಲಿಸರು ಪಂಚನಾಮೆ ಮಾಡಿದರು ಎನ್ನುವುದಕ್ಕೆ ಸಾಕ್ಷಿ ವಿಚಾರ ನನಗೆ ಗೊತ್ತಿಲ್ಲ, ಆದರೆ ಕರೆದುಕೊಂಡು ಹೋಗಿ ಪೋಟೋ ತೆಗೆದರು ಎಂದು ಹೇಳಿದ್ದಾರೆ. ಪಂಚನಾಮೆ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ– 5 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–5 [ಬಿ] ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಯಲಾದ ಪೋಟೋವನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–6 ಎಂದು ಗುರುತಿಸಲಾಗಿದೆ.

9. ಅಲ್ಲಿಂದ ಚಾಸಾಃ 1 ರವರು ನಮ್ಮನ್ನು ಮತ್ತು ಪೋಲಿಸರನ್ನು ಮುನವಳ್ಳಿಯಲ್ಲಿರುವ ತಮ್ಮ ಮನೆಗೆ ಕರೆದುಕೊಂಡು ಬಂದು ಸ್ಥಳ ತೋರಿಸಿ ಅಲ್ಲಿ 1ನೇ ಆರೋಪಿ ಆಕೆಯ ಮೇಲೆ ಅತ್ಯಾಚಾರ ಮಾಡಿದ ಸ್ಥಳ ಎಂದು ತೋರಿಸಿದ್ದು, ಅಲ್ಲಿಯೂ ಸಹ ಪೋಲಿಸರು ಪಂಚನಾಮೆ ಮಾಡಿದ್ದಾರೆ ಎನ್ನುವುದು ಸರಿ. ಪಂಚನಾಮೆಯನ್ನು ಈಗಾಗಲೇ ನಿಪಿ–9 ಎಂದು ಗುರುತಿಸಿದ್ದು, ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–9 [ಬಿ] ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ–10 ಮತ್ತು ನಿಪಿ–11 ರಂತೆ ಪೋಟೋ ತೆಗೆಯಲಾಯಿತು ಎಂದು ಸೂಚಿಸುವುದು ಸರಿ.

10. ದಿನಾಂಕಃ 02–05–2024 ರಂದು ಪೋಲಿಸರು ನನ್ನನ್ನು ಮತ್ತು ಬೀರಪ್ಪ ಬಿರಾಜನವರ ಎನ್ನುವವರನ್ನು ಬೆಳಗಾವಿಯ ಎಸ್.ಪಿ ಕಚೇರಿಗೆ ಕರೆಸಿದ್ದರು ಎನ್ನುವುದು ಸರಿ. ಅಲ್ಲಿ ಪೋಲಿಸರು ಪ್ಯಾಕ ಮಾಡಲಾಗಿದ್ದ ಎರಡು ಮೊಬೈಲಗಳನ್ನು ತೆಗೆದು ತೋರಿಸಿದರು ಎನ್ನುವುದು ಸರಿ. ಅಲ್ಲಿದ್ದ ಪೋಲಿಸರು ಆ ಮೊಬೈಲಗಳನ್ನು ಪರೀಕ್ಷೆ ಮಾಡಿ

ಪುನಃ ಪ್ಯಾಕ ಮಾಡಿ ಪಂಚನಾಮೆ ಮಾಡಿ ನನ್ನ ಸಹಿ ಮಾಡಿಸಿಕೊಂಡರು ಎಂದು ಸೂಚಿಸುವುದು ಸರಿ. ಸದರಿ ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಆ ಪಂಚನಾಮೆಯನ್ನು ನಿಪಿ–18 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–18 [ಎ] ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಯಲಾದ ಫೋಟೋಗಳನ್ನು ಕ್ರಮವಾಗಿ ನಿಪಿ–19 ಮತ್ತು ನಿಪಿ–20 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ**

ಆರೋಪಿತರ ಪರ ಶ್ರೀಮತಿ.ಕೆ.ಎಲ್.ಎನ್ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣ ನೀಡದೇ ಇರುವುದರಿಂದ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.